60

# “ಬಡವರನ್ನು ನೆನಪು ಮಾಡಿಕೊಳ್ಳಿರಿ”

# (20:1-6)

ಅಪೊಸ್ತಲರ ಕೃತ್ಯಗಳು 20ರ ಮೊದಲ ಆರು ವಚನಗಳನ್ನು ಓದುವಾಗ, ಗ್ರೀಸ್ ದೇಶಕ್ಕೆ ಪೌಲನು ಹೋಗಿ ಬಂದ ವಿಚಾರದ ಕುರಿತು ಸಾರಾಂಶವಿದೆ, ಅವನು ತನ್ನ ಮೂರನೆಯ ಪ್ರಯಾಣವನ್ನು ಅಂತ್ಯಗೊಳಿಸಿದನು:

> ಗದ್ದಲವು ನಿಂತ ತರುವಾಯ ಪೌಲನು ಶಿಷ್ಯರನ್ನು ಕೂಡ ಕರೆಸಿ ಧೈರ್ಯಗೊಳಿಸಿ ಅವರ ಅಪ್ಪಣೆ ತೆಗೆದುಕೊಂಡು ಮೆಕೆದೋನ್ಯಕ್ಕೆ ಹೊರಟನು. ಆ ಸೀಮೆಯಲ್ಲಿ ಸಂಚಾರಮಾಡಿ ಅಲ್ಲಿಯವರನ್ನು ಅನೇಕ ಮಾತುಗಳಿಂದ ಧೈರ್ಯಪಡಿಸಿ ಗ್ರೀಸ್ ದೇಶಕ್ಕೆ ಬಂದನು. ಅಲ್ಲಿ ಮೂರು ತಿಂಗಳು ಕಳೆದ ಮೇಲೆ ಸಿರಿಯ ದೇಶಕ್ಕೆ ಸಮುದ್ರ ಮಾರ್ಗವಾಗಿ ಹೋಗಬೇಕೆಂದಿದ್ದಾಗ ಅವನಿಗೆ ವಿರುದ್ಧವಾಗಿ ಯೆಹೂದ್ಯರಲ್ಲಿ ಒಳಸಂಚು ಹುಟ್ಟಿದ್ದರಿಂದ ಅವನು ಮಕೆದೋನ್ಯದ ಮೇಲೆ ಹಿಂತಿರುಗಿ ಹೋಗುವದಕ್ಕೆ ತೀರ್ಮಾನ ಮಾಡಿದನು. ಪುರ್ರನ ಮಗನಾದ ಬೆರೋಯಪಟ್ಟಣದ ಸೋಪತ್ರನೂ ಥೆಸಲೊನೀಕ ದವರಲ್ಲಿ ಅರಿಸ್ತಾರ್ಕನೂ ಸೆಕುಂದನೂ ದೆರ್ಬೆಪಟ್ಟಣದ ಗಾಯನೂ ತಿಮೊಥೆಯನೂ ಆಸ್ಯಸೀಮೆಯವರಲ್ಲಿ ತುಖಿಕನೂ ತ್ರೊಫಿಮನೂ ಆಸ್ಯಸೀಮೆಯವರೆಗೆ ಅವನ ಜೊತೆಯಲ್ಲಿ ಹೋದರು. ಇವರು ಮುಂಚಿತವಾಗಿ ಹೋಗಿ ನಮಗೋಸ್ಕರ ತ್ರೋವದಲ್ಲಿ ಕಾದುಕೊಂಡರು. ಹುಳಿಯಿಲ್ಲದ ರೊಟ್ಟಿಯ ಹಬ್ಬದ ದಿವಸಗಳನ್ನು ಪೂರೈಸಿದ ಮೇಲೆ ನಾವು ಫಿಲಿಪ್ಪಿಯಿಂದ ಹೊರಟು ಹಡಗನ್ನು ಹತ್ತಿ ಐದು ದಿವಸದಲ್ಲಿ ತ್ರೋವದಲ್ಲಿ ಬಂದು ಅವರನ್ನು ಸೇರಿದೆವು (20:1-6ಎ).

ಇತರೆ ವಾಕ್ಯಭಾಗಗಳ ಪ್ರಕಾರ, ಇಲ್ಲಿ ಹೆಚ್ಚು ಆಸಕ್ತಿ ಇಲ್ಲದೆ ಇದ್ದರೂ, ಬಹುಶಃ ಇನ್ನೂ ಹೆಚ್ಚಿನ ನಿರಾಸಕ್ತಿ ಇರಬಹುದು, ಆದರೆ ಅದನ್ನು ಆಳವಾಗಿ ಅಧ್ಯಯನ ಮಾಡುವದಾದರೆ, ಹೆಚ್ಚಿನ ಸತ್ಯಗಳು ದೊರೆಯುತ್ತವೆ.

ಈ ಆರು ವಚನಗಳಲ್ಲಿ ಇರುವ ಅಂತರವನ್ನು ನೋಡುವದಾದರೆ,[1] “ಒಂದು ವರ್ಷಕಾಲದ ಪ್ರಯಾಣ ಹಾಗೂ ಸಾಹಸದ,[2] ಕುರಿತು ನೋಡುತ್ತೇವೆ.” ಅದರ ಕುರಿತ ತಾತ್ಪರ್ಯವನ್ನು ಅಧ್ಯಾಯ 20ರ ಕಡೇ ಭಾಗದಲ್ಲಿ ನೋಡುತ್ತೇವೆ: “ತೆಗೆದುಕೊಳ್ಳುವದಕ್ಕಿಂತಲೂ ಕೊಡುವದೇ ಹೆಚ್ಚಿನ ಭಾಗ್ಯವೆಂಬುದಾಗಿ ಹೇಳಿ ನೀವು ಹಾಗೆಯೇ ದುಡಿದು ಬಲವಿಲ್ಲದವರಿಗೆ ಉಪಕಾರ ಮಾಡಬೇಕು” (ವಚನ 35ಬಿ). ಈ ಕ್ಷಣದಲ್ಲಿ “ಬಲವಿಲ್ಲದವರು” ಎಂದರೆ “ದೇವ ಜನರೊಳಗೆ ಬಡವರಿಗೋಸ್ಕರ ಸ್ವಲ್ಪ ಹಣದ ಸಹಾಯ ಎಂಬ ಹೇಳಿಕೆಗೆ ಉಲ್ಲೆಖವಾಗುತ್ತದೆ”[3] (ರೋಮಾಪುರ 15:26).

ಆರಂಭದಿಂದಲೂ, ಯೆರೂಸಲೇಮಿನ ಸಭೆಯಲ್ಲಿ ಬಡವರ ಸಂಖ್ಯೆ ಹೆಚ್ಚಾಗಿತ್ತು. ಅದು ಸಂಸ್ಥಾಪನೆಗೊಂಡ ತಕ್ಷಣ, ಅವರಲ್ಲಿ ಹೆಚ್ಚು ಹೊಂದಿದ್ದವರು. ತಮ್ಮದೆಲ್ಲವನ್ನು ಇಲ್ಲದವರ ಸಂಗಡ ಹಂಚಿಕೊಂಡಿದ್ದರು (ಅಪೊಸ್ತರ ಕೃತ್ಯಗಳು 2:44, 45; 4:32-35; 6:1). ಕ್ಷಾಮ ಉಂಟಾದಾಗ, ಅಂತಿಯೋಕ್ಯದ ಸಭೆಯವರು ಯೆರೂಸಲೇಮು ಮತ್ತು ಯುದಾಯಕ್ಕೂ ಸಹಾಯವನ್ನು ಕಳುಹಿಸಿದರು (11:27-30; 12:25). ಪೌಲ ಮತ್ತು ಬಾರ್ನಬರು ಯೆರೂಸಲೇಮಿಗೆ ವಿಶೇಷ ಪ್ರಯಾಣವನ್ನು ಮಾಡಿದಾಗ, ಪೇತ್ರ ಮತ್ತು ಇತರೆ ನಾಯಕರು

"ಬಡವರನ್ನು ನೆನಪು ಮಾಡಿರಿ" ಮುಖ್ಯವಾಗಿ ಕ್ರೈಸ್ತರಾದ ಯೆಹೂದ್ಯರನ್ನು ನೆನಪಿಸಿರಿ ಅಂದರು (ಯೆರೂಸಲೇಮಿನಲ್ಲಿದ್ದವರನ್ನು).[4] ಪೌಲನು ಅದನ್ನು ಮಾಡಲು "ಆಸಕ್ತನಾಗಿದ್ದೇನೆ" ಅಂದನು (ಗಲಾತ್ಯ 2:10).

ಪೌಲನು ತನ್ನ ಎರಡನೆಯ ಹಾಗೂ ಮೂರನೆಯ ಸೇವಾ ಪ್ರಯಾಣವನ್ನು ಮಾಡುವಾಗ, ಯೆರೂಸಲೇಮಿನವರಿಗೆ ಸಹಾಯ ಮಾಡುವ ಉಪಾಯಮಾಡಿದನು.[5] ಅನ್ಯರು ಮಾಡುವ ಈ ಸಹಾಯದಿಂದ, ಯೆಹೂದ್ಯರ ಮತ್ತು ಅನ್ಯರ ನಡುವೆ ಇರುವ ಸಂಬಂಧದ ಬಿರುಕು ಸುಗಮವಾಗುವದೆಂದು ನಿರೀಕ್ಷಿಸಿದ್ದರು (2 ಕೊರಿಂಥ 9:11-14). ಮೂರನೆಯ ಪ್ರಯಾಣದಲ್ಲಿ, ಅವನು ಕಾಣಿಕೆಯನ್ನು ಸಂಗ್ರಹಿಸಿದನು (1 ಕೊರಿಂಥ 16:1, 2; 2 ಕೊರಿಂಥ 8:10). ಈಗ ಅವನು ಆ ಕಾರ್ಯವನ್ನು ಸಂಪೂರ್ಣಮಾಡಿ, ಯೆರೂಸಲೇಮಿಗೆ ಅದನ್ನು ತೆಗೆದು ಕೊಂಡು ಹೋಗಲು ಸಿದ್ಧನಾಗಿದ್ದನು.

ಅಪೊಸ್ತಲರ ಕೃತ್ಯಗಳು 20:1-6ನ್ನು ಧ್ಯಾನಿಸುವಾಗ, ಈ ಮೇಲಿನ ಅಂಶದ ಉದ್ದೇಶವನ್ನು ನೆನಪಿನಲ್ಲಿ ಇಟ್ಟುಕೊಳ್ಳೋಣ.

## ಕಾಳಜಿ (20:1)

ವಚನ 1 ಕಾಳಜಿಯಿಂದ ತುಂಬಿರುತ್ತದೆ: "ಗದ್ದಲವು ನಿಂತ ತರುವಾಯ ಪೌಲನು ಶಿಷ್ಯರನ್ನು ಕೂಡ ಕರೆಸಿ ಧೈರ್ಯಗೊಳಿಸಿ ಅವರ ಅಪ್ಪಣೆ ತೆಗೆದುಕೊಂಡು ಮೆಕೆದೋನ್ಯಕ್ಕೆ ಹೊರಟನು." "ಮೊದಲನೆಯದಾಗಿ, ಅವನು ಎಫೆಸದ ಕ್ರೈಸ್ತರ ಕುರಿತು ಕಾಳಜಿವಹಿಸಿದ್ದನು." ಪೌಲನು ಶಿಷ್ಯರನ್ನು ಕೂಡ ಕರೆಸಿದನು. ಒಂದು ವೇಳೆ ಅವರಲ್ಲಿ ಯಾರಿಗಾದರೂ ಗಾಯವಾಗಿರಬಹುದೆಂದು ನೋಡಲು ಕರೆಸಿರಬಹುದು, ಅಥವಾ ಅವನು ಏಕೆ ನಾಟಕ ಶಾಲೆಗೆ ಬರಲಿಲ್ಲ ಎಂಬ ಕಾರಣವನ್ನು ತಿಳಿಸಲು ಮತ್ತು ನಿಶ್ಚಯವಾಗಿಯೂ ಅವರನ್ನು ಉತ್ತೇಜನ ಮಾಡಲು ಕರೆಸಿರಬಹುದು. ಎರಡನೆಯದಾಗಿ, ಈಗಾಗಲೇ ತಿಳಿಸಿರುವಂತೆ, ಯೆರೂಸಲೇಮಿನಲ್ಲಿದ ಬಡ ಜನರಿಗೆ ಸಹಾಯ ಮಾಡುವ ಸಲುವಾಗಿಯೂ ಇರಬಹುದು. "ಕೊರತೆಯಲ್ಲಿರುವವರ ಕೊರತೆಯನ್ನು ನೀಗಿಸಲು ಪೌಲನು ಮೆಕೆದೋನ್ಯಕ್ಕೆ ಹೊರಟಿದ್ದನು." ಹಾಗೂ ಅವನು ನಿದ್ರಾಹೀನವಾದ ರಾತ್ರಿಗಳ ಕಾಳಜಿಯನ್ನು - ಮತ್ತು ಗ್ರೀಸ್‌ಗೆ ಹೊರಟಿದ್ದ ಕಾರಣವೂ ಮತ್ತು ಕೊರಿಂಥದ ಸಮಸ್ಯೆಗಳ ಭಾರವು ಅವನ ಮೇಲೆ ಇತ್ತು.

ನಮ್ಮ ಹಿಂದಿನ ಪಾಠದಲ್ಲಿ, ಪೌಲನು ತೀತನನ್ನು ಕೊರಿಂಥಕ್ಕೆ ತಿಮೋಥೆಯ ಕೆಲಸವನ್ನು ಮುಂದುವರಿಸಲು ಕಳುಹಿಸಿದ್ದನು ಎಂದು ತಿಳಿದೆವು (2 ಕೊರಿಂಥ 2:12, 13; 7:5-7; 8:6, 23). ಕೊರಿಂಥದವರ ಕುರಿತಾದ ವರ್ತಮಾನವನ್ನು ತೀತನು, ಪೌಲನಿಗೆ ತಿಳಿಸಬೇಕಿತ್ತು ಪ್ರಮುಖವಾಗಿ, ಅವನನ್ನು ಕೊರಿಂಥದಿಂದ ಮೆಕೆದೋನ್ಯಕ್ಕೆ ಕರೆದೊಯ್ಯುವ ಹಾಗೂ ತ್ರೋವಕ್ಕೂ ಮತ್ತು ಎಫೆಸಕ್ಕೂ ಹೋಗುವ ಉದ್ದೇಶವಾಗಿತ್ತು. ಪೌಲನು ಎಫೆಸದಿಂದ ಮೆಕೆದೋನ್ಯಕ್ಕೆ ಹೋಗುವ ದಾರಿಯಲ್ಲಿ ತ್ರೋವದಲ್ಲಿ ಇಳುಕೊಳ್ಳುವವನಿದ್ದನು (2 ಕೊರಿಂಥ 2:12), ಮತ್ತು ತೀತನನ್ನು ಸೇರಿಕೊಳ್ಳುವವನಿದ್ದನು.

ತ್ರೋವವು ಏಗಿಯನ್ ಸಮುದ್ರದ[6] ರೇವು ಪಟ್ಟಣವಾಗಿತ್ತು. ಇಲ್ಲಿಂದಲೇ ಪೌಲನು ಮೆಕೆದೋನ್ಯದ ಕರೆಯನ್ನು ಹೊಂದಿದ್ದನು (ಅಪೊಸ್ತರ ಕೃತ್ಯಗಳು 16:8-10). ಆ ಅಲ್ಪ ಭೇಟಿಯಲ್ಲಿ ಪೌಲನು ಅಲ್ಪವಾಗಿ ಅಥವಾ ಯಾವುದೇ ವಿಧವಾದ ಪ್ರಸಂಗವನ್ನು ಮಾಡದೇ ಇರಬಹುದು. ಹಾಗೂ, ಈ ಸಮಯದಲ್ಲಿ, ಅಲ್ಲಿ ಅವನಿಗೆ "ಬಾಗಿಲು ತೆರೆದಿತ್ತು" (2 ಕೊರಿಂಥ 2:12); ಆ ಪಟ್ಟಣವು ಸುವಾರ್ತೆಗೆ ಸಿದ್ಧವಾಗಿತ್ತು. ಅಲ್ಲಿ ಪೌಲನು - ಇಷ್ಟ ಪಡದ ಒಂದು ಅವಕಾಶವನ್ನು ಒಪ್ಪಿಕೊಂಡನು:[7] ಅವನು ಕೊರಿಂಥದ ಬಗ್ಗೆ ಕಾಳಜಿ ಹೊಂದಿದ್ದರಿಂದ, ಆ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ಇಷ್ಟಪಡಲಿಲ್ಲ. ನಂತರ, ಅವನು ಬರೆದ: "ಆದರೂ ನನ್ನ ಸಹೋದರನಾದ ತೀತನು ನನಗೆ ಸಿಕ್ಕಲಿಲ್ಲವಾದ ಕಾರಣ ನನ್ನ ಆತ್ಮಕ್ಕೆ

ಉಪಶಮನವಿಲ್ಲದೆ (ತ್ರೋವದವರಿಂದ) ಅಲ್ಲಿದ್ದವರಿಂದ ಕಳುಹಿಸಿಕೊಂಡವನಾಗಿ ಹೊರಟು ಮೆಕೆದೋನ್ಯಕ್ಕೆ ಬಂದೆನು" (2 ಕೊರಿಂಥ 2:13).

ಮೆಕೆದೋನ್ಯದಲ್ಲಿ ಪೌಲನು ತೀತನನ್ನು ಸಂಧಿಸುವವನಿದ್ದನು, ಆದರೆ ಅಲ್ಲಿ ತೀತನು ಇರಲಿಲ್ಲ. ಅವನು ಯೌವನಸ್ಥನಾದ ಪ್ರಸಂಗಿಗಾಗಿ ಕಾಯುವಾಗ, ಯೆರೂಸಲೇಮಿನವರಿಗಾಗಿ ಕಾಣಿಕೆನ್ನು ಸಂಗ್ರಹಿಸುತ್ತಿದ್ದನು, ಮತ್ತು ಮೆಕೆದೋನ್ಯದವರ ಕೊಡುಗೆಯ ಬಗ್ಗೆ ಆಶ್ಚರ್ಯ ಚಕಿತನಾದನು (2 ಕೊರಿಂಥ 8:1-5) - ಅದಾಗ್ಯೂ ಅವನು ಕಾಳಜಿಯಿಂದ ತುಂಬಿದವನಾಗಿದ್ದನು. ನಂತರ ಅವನು ಬರೆಯುವಾಗ, "ನಾವು ಮೆಕೆದೋನ್ಯಕ್ಕೆ ಬಂದಾಗ ನಮ್ಮ ಮನಸ್ಸಿಗೆ ಏನೂ ಉಪಶಮನವಾಗಲಿಲ್ಲ, ಎಲ್ಲಾ ವಿಷಯದಲ್ಲಿ ನಮಗೆ ಸಂಕಟವಿತ್ತು; ಹೊರಗೆ ಕಲಹ, ಒಳಗೆ ಭಯ" (2 ಕೊರಿಂಥ 7:5). ಯೆಹೂದ್ಯರು ಅವನನ್ನು ಥೆಸಲೋನಿಕದಿಂದಲೂ ಮತ್ತು ಬೆರೋಯದಿಂದಲೂ ಹೊರಗೆ ಹಾಕಿದ ಕುರಿತು "ಕಲಹ" ಎಂದು ಹೇಳಿರಬಹುದು. ಇತರ "ಭಯಗಳೊಂದಿಗೆ" ಕೊರಿಂಥದವರ ಪ್ರತಿಕ್ರಿಯೆಯಿಂದಲೂ "ಭಯ" ಉಂಟಾಗಿರಬಹುದು. (ಪೌಲನು ಸಹ ಕೆಟ್ಟ ದಿನಗಳನ್ನು ಎದುರಿಸಿದ್ದನು; ಕರ್ತನು ಅಂತಹ ದಿನಗಳಲ್ಲಿ ನಿನ್ನನ್ನೂ ಕಾಪಾಡುವನು.)

ಅಂತಿಮವಾಗಿ ತೀತನು, ಶುಭ ಸಮಾಚಾರದೊಂದಿಗೆ ಬಂದನು. ಪೌಲನ ಬೋಧನೆ ಹಾಗೆ ಎಚ್ಚರಿಕೆಗೆ ಸಭೆಯು ಉತ್ತಮವಾದ ಪ್ರತಿಕ್ರಿಯೆಯನ್ನು ನೀಡಿದ್ದರು. ಪೌಲನು ನಿರಾಶನದ ಕುರಿತು ಬರೆದು:

> ಆದರೆ ದೀನಾವಸ್ಥೆಯಲ್ಲಿರುವವರನ್ನು ಸಂತೈಸುವ ದೇವರು ತೀತನ ಬರುವಿಕೆಯಿಂದ ನಮ್ಮನ್ನು ಸಂತೈಸಿದನು. ಅವನ ಬರುವಿಕೆಯಿಂದ ಮಾತ್ರವಲ್ಲದೆ ಅವನು ತಾನು ನಿಮ್ಮಲ್ಲಿ ಬಹಳ ಆದರಣೆಯನ್ನು ಹೊಂದಿದೆನೆಂದು ಹೇಳಿದ್ದರಿಂದಲೂ ನಮ್ಮನ್ನು ಸಂತೈಸಿದನು. ಅವನು ನಿಮ್ಮ ಹಂಬಲ, ನಿಮ್ಮ ಗೋಳಾಟ, ನನ್ನ ವಿಷಯವಾದ ನಿಮ್ಮ ಆಸಕ್ತಿ ಇವುಗಳನ್ನು ನಮಗೆ ತಿಳಿಸಿದಾಗ ನಾನು ಹೆಚ್ಚಾಗಿ ಸಂತೋಷಪಟ್ಟೆನು (2 ಕೊರಿಂಥ 7:6, 7).

2 ಕೊರಿಂಥ ಪತ್ರಿಕೆಯನ್ನು ಪೌಲನು ಆ ದೇಶ ಮಾಡಿ ಬರೆಸಿದನು ಎಂದು ನಾವು ಕರೆಯುತ್ತೇವೆ.[8] ನಂತರ ಅವನು ತೀತನನ್ನು ಹಿಂದಕ್ಕೆ ಕಳುಹಿಸಿದನು, ಅವನೊಂದಿಗೆ ಇಬ್ಬರನ್ನು ಕಳುಹಿಸಿದನು (2 ಕೊರಿಂಥ 8:16-24).[9]

ಪೌಲನು ಸಹೋದರರ ಕಾಳಜಿಯನ್ನು ತಿಳಿಯದೆ, 2 ಕೊರಿಂಥ ಪತ್ರಿಕೆಯನ್ನು ಓದಲು ಸಾಧ್ಯವಿಲ್ಲ. ಅವನ ಆತ್ಮಕ್ಕೆ "ಉಪಶಮನವಾಗಿರಲಿಲ್ಲ" (2:13; 7:5); ಅವನು "ಭಯ" ದಿಂದಲೂ ತುಂಬಿದ್ದನು (7:5); ಮತ್ತು ಅವನು "ಕುಗ್ಗಿಸಲ್ಪಟ್ಟಿದ್ದನು" (7:6; NIV) ನಾವುಗಳೂ ಸಹ ನಮ್ಮ ಸಹೋದರರಿಗಾಗಿ ಕಾಳಜಿ ಹೊಂದಿರುವವರಾಗಿರ ಬೇಕು - ಅವರು ದೈಹೀಕ ಕೊರತೆಗಳನ್ನು ಹೊಂದಿರುವಾಗ (ಪೌಲನು ಯೆರೂಸಲೇಮಿನ ಕ್ರೈಸ್ತರಿಗಾಗಿ ಕಾಳಜಿಹೊಂದಿದ ಹಾಗೆ) ಮತ್ತು ಆತ್ಮೀಕ ಕೊರತೆ ಇರುವಾಗಲೂ (ಕೊರಿಂಥದವರ ಬಲಹೀನತೆಯ ಕುರಿತು ಪೌಲನು ಬೇಸರಗೊಂಡಂತೆ)! ನಾವು ಪೌಲನಂತೆ ಕಾಳಜಿ ಮಾಡಬೇಕು:

> ಅಂದವುಳ್ಳ ಅಂಗಗಳಿಗೆ ಏನೂ ಅವಶ್ಯವಿಲ್ಲ. ದೇಹದಲ್ಲಿ ಭೇದವೇನೂ ಇರದೆ ಅಂಗಗಳು ಒಂದಕ್ಕೊಂದರ ಹಿತವನ್ನು ಚಿಂತಿಸುವ ಹಾಗೆ ದೇವರು ಕೊರತೆಯುಳ್ಳದ್ದಕ್ಕೆ ಹೆಚ್ಚಾದ ಮಾನವನ್ನು ಕೊಟ್ಟು ದೇಹವನ್ನು ಹದವಾಗಿ ಕೂಡಿಸಿದ್ದಾನೆ. ಒಂದು ಅಂಗಕ್ಕೆ ನೋವಾದರೆ ಎಲ್ಲಾ ಅಂಗಗಳಿಗೂ ನೋವಾಗುತ್ತದೆ; ಒಂದು ಅಂಗಕ್ಕೆ ಮರ್ಯಾದೆ ಬಂದರೆ ಎಲ್ಲಾ ಅಂಗಗಳಿಗೂ ಸಂತೋಷವಾಗುತ್ತದೆ. ನೀವು ಕ್ರಿಸ್ತನ ದೇಹವು, ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ (1 ಕೊರಿಂಥ 12:25-27).

## ದೇಣಿಗೆ (20:2-4)

ಯೆರೂಸಲೇಮಿನ ದೇಣಿಗೆಯನ್ನು ಸಂಪೂರ್ಣ ಮಾಡಬೇಕೆಂಬ ಒಂದಾದ ಉದ್ದೇಶ ದಿಂದ ಪೌಲನು 2 ಕೊರಿಂಥ ಪತ್ರವನ್ನು ಬರೆದಿರುವನು. ಮೆಕೆದೋನ್ಯದವರ ಕೊಡುವ ವಿಷಯವನ್ನು ಅನುಸರಿಸಬೇಕೆಂದು ಪೌಲನು ತಿಳಿಸಿದನು (ಅಧ್ಯಾಯ 8 ಮತ್ತು 9).

ಪೌಲನು ಪತ್ರಿಕೆಯನ್ನು ರವಾನಿಸಿದ ನಂತರ, ಮೆಕೆದೋನ್ಯದಲ್ಲಿ ದೀರ್ಘಕಾಲ ತಂಗಿದ್ದನು. ಅಲ್ಲಿ ಅವನು ಪ್ರಸಂಗವನ್ನು ಉಪದೇಶವನ್ನು ಮಾಡಿದನು (ಅವನು ಫಿಲಿಪ್ಪಿ, ಥೆಸಲೋನಿಕ, ಬೆರೋಯ, ಮತ್ತು ಇತರೆ ಸ್ಥಳಗಳ ಕ್ರೈಸ್ತರನ್ನು ಸಂಧಿಸಿದಾಗ ಸಂತಸಗೊಂಡಿದ್ದನ್ನು ನಾನು ಊಹಿಸುತ್ತೇನೆ). ಈ ಸಮಯದಲ್ಲಿಯೇ, ಅವನು ಉತ್ತರ ಪ್ರದೇಶದ ಇಲ್ಲುರಿಕಕ್ಕೆ ಹೋಗಿ ಸುವಾರ್ತೆ ಸಾರಿದನು (ರೋಮಾಪುರ 15:19).[10] ಲೂಕನು ಇದನ್ನು ಸರಳವಾಗಿ ದಾಖಲಿಸಿ, "ಆ ಸೀಮೆಯಲ್ಲಿ ಅವನು ಸಂಚಾರ ಮಾಡಿ ಅಲ್ಲಿಯವರನ್ನು ಅನೇಕ ಮಾತುಗಳಿಂದ ಧೈರ್ಯಪಡಿಸಿ,[11] ಗ್ರೀಸ್ ದೇಶಕ್ಕೆ ಬಂದನು" (ಅಪೊಸ್ತಲರ ಕೃತ್ಯಗಳು 20:2). "ಅಲ್ಲಿ ಅವನು ಮೂರು ತಿಂಗಳುಗಳ ಕಾಲ ಇದ್ದನು"[12] (ವಚನ 3ಎ). ಅಲ್ಲಿ ಅವನು ಗಾಯನ ಸಂಗಡ ಅತಿಥಿಯಾಗಿದ್ದನು[13] (ರೋಮಾಪುರ 16:23).

ಪೌಲನು ಕೊರಿಂಥದಲ್ಲಿದ್ದಾಗ, ಅವನು "ರೋಮಾಪುರದ ಉತ್ತಮವಾದ ಪತ್ರಿಕೆಯನ್ನು" ಬರೆದನು.[14] ನಂತರ ಅವನು ರೋಮಾಯವನ್ನು ಸಂಧಿಸುವ ಸಿದ್ಧತೆಯಲ್ಲಿದ್ದನು (ರೋಮಾಪುರ 1:9-15; 15:22-29). ಹೇಗೂ, ಅವನು ಯೆರೂಸಲೇಮನ್ನು ತಲುಪುವಾಗ, ಅವನು ಎದುರಿಸಬೇಕಿದ್ದ ಅಪಾಯದ ಸಮಸ್ಯೆಗಳ ಬಗ್ಗೆ ಅರಿತ್ತಿದ್ದನು (ರೋಮಾಪುರ 15:31; ಅಪೊಸ್ತಲರ ಕೃತ್ಯಗಳು 20:22-25; 21:13, 14). ರೋಮಾಪುರ ಪತ್ರದಲ್ಲಿ ಬರೆಯುವಾಗ, ಅವನು ಆ ಸ್ಥಳವನ್ನು ಸೇರಿದ್ದರೂ ಸರಿಯೇ, ಸೇರದೆ ಹೋದರೂ ಸರಿಯೇ, "ಕ್ರೈಸ್ತತ್ವದ ಉಲ್ಲೇಖವನ್ನು ಮಾತ್ರ ಸ್ಪಷ್ಟ ಮಾಡಿದ್ದನು."

ಪೌಲನು ರೋಮಾ ಪತ್ರಿಕೆಯನ್ನು ಬರೆಯುವಾಗ, ಯೆರೂಸಲೇಮಿಗಾಗಿ ಕಾಣಿಕೆ ಸಂಗ್ರಹ ಮಾಡುವ ಕಾರ್ಯವು ಕೊರಿಂಥದಲ್ಲಿ ಸುಗಮವಾಗಿ ನಡೆದಿತ್ತು. ಅವನು ಅಖಾಯದ ಕ್ರೈಸ್ತರ ಕುರಿತು "ದೇವಜನರೊಳಗೆ ಬಡವರಿಗೋಸ್ಕರ ಸ್ವಲ್ಪ ಹಣದ ಸಹಾಯವನ್ನು ಮಾಡಬೇಕೆಂಬುದಾಗಿ ಮೆಕೆದೋನ್ಯ ಅಖಾಯ ಸೀಮೆಗಳವರು ಇಷ್ಟಪಟ್ಟಿದ್ದಾರೆ" ಎಂದು ಬರೆದನು (ರೋಮಾಪುರ 15:26). NCVಯಲ್ಲಿ "ಇದನ್ನು ಮಾಡಲು ಅವರು ಸಂತೋಷಗೊಂಡರು" ಎಂಬುದಾಗಿದೆ.

ಯೆರೂಸಲೋಮಿನವರಿಗಾಗಿ ಒಂದು ಪ್ರೀತಿಯ ಕಾಣಿಕೆಯನ್ನು ಸಂಗ್ರಹಿಸಲು ವಿವಿಧ ಸಭೆಗಳಿಂದ ಬಂದಿದ್ದ ಪ್ರತಿನಿಧಿಗಳೊಂದಿಗೆ, ಪೌಲನು ಕೊರಿಂಥದಲ್ಲಿ ಸೇರಿ ಬಂದಿರಬಹುದು (ಅಪೊಸ್ತಲರ ಕೃತ್ಯಗಳು 20:4).[15] "ಈ ಪಾಲುದಾರರೆಲ್ಲರೂ" (2 ಕೊರಿಂಥ 8:23). ತಮ್ಮ ಸಭೆಗಳಿಂದ ದೇಣಿಗೆಯನ್ನು ಸಂಗ್ರಹಿಸಿದ ನಂತರ, ದೇಣಿಗೆಯು ಸಿದ್ಧವಾಗಿತ್ತು.

ನಾನು ಈಗಾಗಲೇ ತಿಳಿಸಿರುವಂತೆ, ನಮ್ಮ ಸಹೋದರರಿಗಾಗಿ, ನಾವುಗಳು ಕಾಳಜಿಯನ್ನು ವಹಿಸಬೇಕು. ನಮ್ಮ ಕಾಳಜಿಯನ್ನು ತೋರ್ಪಡಿಸಬೇಕು ಎಂದು ಮೆಕೆದೋನ್ಯ, ಅಖಾಯ, ಆಸ್ಯ ಮತ್ತು ಗಲಾತ್ಯ ಸಭೆಗಳವರು ಮಾದರಿಯನ್ನು ತೋರಿಸಿರುವರು. ಪ್ರಾಯೋಗಿಕವಾಗಿದ್ದ ಯಾಕೋಬನು ಈ ಪ್ರಶ್ನೆಯನ್ನು ಕೇಳಿರುವನು: "ಒಬ್ಬ ಸಹೋದರನಿಗೆ ಇಲ್ಲವೇ ಒಬ್ಬ ಸಹೋದರಿಗೆ ಬಟ್ಟೆಯೂ ಆ ದಿನದ ಆಹಾರವೂ ಇಲ್ಲದೆ ಇರುವಾಗ, ನಿಮ್ಮಲ್ಲಿ ಒಬ್ಬನು ಅವರಿಗೆ ದೇಹಕ್ಕೆ ಬೇಕಾದದ್ದನ್ನು ಕೊಡದೆ ಸಮಾಧಾನದಿಂದ ಹೋಗಿರಿ, ಬೆಂಕಿಕಾಯಿಸಿಕೊಳ್ಳಿರಿ. ಹೊಟ್ಟೆ ತುಂಬಿಸಿಕೊಳ್ಳಿ ಎಂದು ಬರೀ ಮಾತು ಹೇಳಿದರೆ ಪ್ರಯೋಜನವೇನು?"[16] (ಯಾಕೋಬ 2:15, 16).

## ಎಚ್ಚರಿಕೆ (20:4)

20:4ರಲ್ಲಿ ಏಳು ಜನರ ಪಟ್ಟಿಯನ್ನು ಮಾಡಲಾಗಿದೆ ಅವರು ಪುರ್ರನ ಮಗನಾದ ಬೇರೋಯ ಪಟ್ಟಣದ ಸೋಪತ್ರನು ಥೆಸಲೋನಿಕದಲ್ಲಿನ ಅರಿಸ್ತಾರ್ಕನು[17] ಸಕುಂದನು,[18] ದೆರ್ಬೆ, ಪಟ್ಟಣದ ಗಾಯನೂ, ತಿಮೊಥೆಯನೂ[19] ಆಸ್ಯ ಸೀಮೆಯವರಲ್ಲಿ ತುಖಿಕನೂ,[20] ತ್ರೋಫಿಮನು,[21] ಆಸ್ಯ ಸೀಮೆಯವರೆಗೆ ಅವನ ಜೊತೆಯಲ್ಲಿ ಹೋದರು. ಸೋಪತ್ರನು ಅರಿಸ್ತಾರ್ಕನು, ಹಾಗೂ ಸೆಕುಂದನು ಮೆಕೆದೋನ್ಯ ಸಭೆಗಳ ಪ್ರತಿನಿಧಿಗಳಾಗಿದ್ದರು. ಗಾಯನು ಮತ್ತು ತಿಮೊಥೆ ಗಲಾತ್ಯ ಸಭೆಗಳ ಪ್ರತಿನಿಧಿಗಳಾಗಿದ್ದರು. ತುಖಿಕನು ಮತ್ತು ತ್ರೋಫಿಮನು[22] ಆಸ್ಯ ಸಭೆಗಳ ಪ್ರತಿನಿಧಿಗಳಾಗಿದ್ದರು. ಇವರೆಲ್ಲರು ದೇಣಿಗೆಯನ್ನು ತೆಗೆದುಕೊಂಡು ಪೌಲನ ಸಂಗಡ ಪ್ರಯಾಣಿಸಿದರು - ಆದರೆ ಏಕೆ?

ಕೆಲವರ ಅಭಿಪ್ರಾಯದಂತೆ, ಪೌಲನು ಈ ಅಲ್ಪ ದೇಣಿಗೆಯನ್ನು[23] ತೆಗೆದುಕೊಂಡು ಹೋಗುವಾಗ, ಈ ಮನುಷ್ಯರು ಅವನಿಗೆ ಕಾವಲುಗಾರರಾಗಿರಬಹುದು. ಅಥವಾ ಅವರುಗಳು ಹಣವನ್ನು (ಅವುಗಳು ನಾಣ್ಯಗಳಾಗಿದ್ದರಿಂದ) ಭಾಗ ಮಾಡಿ, ಅವರಲ್ಲಿ ಹಣವಿದೆ ಎಂದು ಜನರು ತಿಳಿಯದ ಹಾಗೆ, ತಮ್ಮ ದೇಹದಲ್ಲಿ ಅಡಗಿಸಿ ಇಟ್ಟುಕೊಂಡಿರಬಹುದು. ಇನ್ನೊಂದು ಆಸಕ್ತಿಕರವಾದ ಸಂಗತಿ ಏನೆಂದರೆ, ಅನ್ಯರಿಗೆ ಸುವಾರ್ತೆಯು ಸಾರಲ್ಪಟ್ಟಿದ್ದರಿಂದ, ಅವರಲ್ಲಿ ಉಂಟಾದ ಕಾರ್ಯದ ನಿದರ್ಶನವನ್ನು ಯೆಹೂದ್ಯರು ಅರಿಯಬೇಕೆಂದು ಪೌಲನು ಬಯಸಿರಲೂ ಬಹುದು. ಇದರಿಂದ ಯೆಹೂದ್ಯರು ಅನ್ಯರ ಕುರಿತು ಒಳ್ಳೆಯ ಮನೋಭಾವನ ಹೊಂದುವ ಸಾಧ್ಯತೆಯಿತ್ತು.[24]

ಈ ಯೋಚನೆಯು ನ್ಯಾಯಸಮ್ಮತವಿರಬಹುದು ಅಥವಾ ಇಲ್ಲದೆಯೂ ಇರಬಹುದು ಹೇಗೂ ಈ ಕಾಣಿಕೆಯಲ್ಲಿ ಯಾವುದೇ ವಿಧವಾದ, ಹಾಗೂ ವ್ಯಕ್ತಿಗತವಾದ ಮೋಸವು ನಡೆಯಬಾರದೆಂದು ಪೌಲನು ಈ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡಿದ್ದನು. ಅವನು ಈ ದೇಣಿಗೆಯ ಕುರಿತು ಕೊರಿಂಥದವರಿಗೆ ಬರೆಯುವಾಗ, "ನಾನು ಬಂದ ಮೇಲೆ ನೀವು ಯಾರನ್ನು ಯೋಗ್ಯರೆಂದು ಸೂಚಿಸುವಿರೋ ಅವರನ್ನು ಯೆರೂಸಲೇಮಿಗೆ ನಿಮ್ಮ ಉಪಕಾರ ದ್ರವ್ಯವನ್ನು ತೆಗೆದು ಹೋಗುವದಕ್ಕೆ ಪತ್ರಗಳನ್ನು ಕೊಟ್ಟು ಕಳುಹಿಸುವೆನು. ನಾನು ಸಹ ಹೋಗುವದು ಯುಕ್ತವಾಗಿ ತೋರಿದರೆ ಅವರು ನನ್ನ ಜೊತೆಯಲ್ಲಿ ಬರಬಹುದು" (1 ಕೊರಿಂಥ 16:3, 4). ಪ್ರತಿನಿಧಿಗಳನ್ನು ಆಯ್ಕೆಮಾಡಿ, ಅವರ ಸಂಗಡ ದೇಣಿಗೆಯನ್ನು ಯೆರೂಸಲೇಮಿಗೆ ಕಳುಹಿಸುವ ಏರ್ಪಾಟು ಮಾಡಿದರು (ಪೌಲನು ತಾನೇ ಹೋಗುವೆನೆಂದು ಹೇಳಲಿಲ್ಲ) ಈ ದೇಣಿಗೆಯನ್ನು ಸಂಗ್ರಹಿಸಲು ಸೇರಿ ಬಂದಿದ್ದ ಪ್ರತಿಯೊಬ್ಬ ಪ್ರತಿನಿಧಿಗೂ ಈ ಸಲಹೆಗಳನ್ನು ನೀಡಲಾಯಿತು (ನೋಡಿರಿ 2 ಕೊರಿಂಥ 8:19, 23ಬಿ).

ಪೌಲನು, ಅಲ್ಲಿ ಯಾವುದೇ ವಿಧವಾದ ಸಣ್ಣ ಮೋಸವು ಜರುಗದಂತೆ ಜಾಗೃತಿವಹಿಸಿದ್ದನು. ಅವನು ಕೊರಿಂಥದವರಿಗೆ ಬರೆದು ಮುಂದುವರೆಸಿದ ಪತ್ರದಲ್ಲಿ, ಯೆರೂಸಲೇಮಿಗೆ ದೇಣಿಗೆಯನ್ನು ಕೊಂಡೊಯ್ಯುವ ಒಬ್ಬ ಸಹೋದರನು ಕುರಿತು ಪೌಲನು ಬರೆದು: "ಈ ಧರ್ಮ ಕಾರ್ಯ ಸಂಬಂಧವಾಗಿ ಸಭೆಗಳವರು ಈತನನ್ನು ನಮ್ಮ ಸಂಗಡ ಪ್ರಯಾಣ ಮಾಡುವಂತೆ ಗೊತ್ತು ಮಾಡಿದ್ದಾರೆ. ಅವರು ಹೀಗೆ ಮಾಡಿದ್ದರಿಂದ ಕರ್ತನಿಗೆ ಘನವೂ ನಮ್ಮಲ್ಲಿ ಸಿದ್ಧ ಮನಸ್ಸು ಉಂಟಾಗುವದು ..." (2 ಕೊರಿಂಥ 8:19). ನಂತರ ಪೌಲನು ತನ್ನ ಈ ಅಭಿಪ್ರಾಯಕ್ಕೆ ಕಾರಣವನ್ನು ನೀಡಿರುವನು. "ನಾವು ಪಾರುಪತ್ಯ ಮಾಡುವ ಈ ದ್ರವ್ಯ ಸಂಚಯದ ವಿಷಯದಲ್ಲಿ ಒಬ್ಬರೂ ನಮ್ಮ ಮೇಲೆ ತಪ್ಪು ಹೊರಿಸುವದಕ್ಕೆ ಆಸ್ಪದವಿರಬಾರದು. ಯಾಕಂದರೆ ಕರ್ತನ ದೃಷ್ಟಿಯಲ್ಲಿ ಮಾತ್ರವಲ್ಲದೆ ಮನುಷ್ಯರ ದೃಷ್ಟಿಯಲ್ಲೂ ಗೌರವವಾದದ್ದನ್ನು ಯೋಚನೆಗೆ ತಂದುಕೊಳ್ಳುವವರಾಗಿದ್ದೇವೆ" (2 ಕೊರಿಂಥ 8:20, 21). ಪೌಲನು ಈ ವಿಷಯದಲ್ಲಿ *ದೇವರ* ಯೋಚನೆಯ ಸಂಗಡ *ಮನುಷ್ಯರ* ಅಭಿಪ್ರಾಯವನ್ನು ಪರಿಗ್ರಹಿಸಿದನು!

ಹಣದ ವಿಚಾರದಲ್ಲಿ ಎಚ್ಚರಿಕೆಯನ್ನು ನೀಡುವಾಗ ಕೆಲವರಿಗೆ ದಿಕ್ಕು ತೋಚ

ದಂತಾಗುತ್ತದೆ. ಕೆಲವರು ಇದರ ನಿಮಿತ್ತ ಬೇಸರಗೊಂಡು, "ಅವರು ನನ್ನ ಮೇಲೆ ವಿಶ್ವಾಸ ಇಡದೆ ಹೋದರೆ ನಾನು ಬಿಟ್ಟು ಹೋಗುತ್ತೇನೆ" ಎಂದು ಹೇಳುವರು. ಪೌಲನು ಅವನ ಮೇಲೆ ವಿಶ್ವಾಸ ಇಡಬೇಕೆಂದು ಎಂದಿಗೂ ಹೇಳಲಿಲ್ಲ. "ಅವನು ಕೇವಲ ಅಪೊಸ್ತಲನಾಗಿದ್ದರಿಂದ"; ವಿಶ್ವಾಸವಿಡೀ ಎಂದು ಹೇಳಲಿಲ್ಲ. ಅದರ ಬದಲಾಗಿ, ಅವನ ಮೇಲೆ ಯಾವುದೇ ವಿಧವಾದ ಅಪವಾದ ಬಾರದಂತೆ ಎಚ್ಚರವಹಿಸಿದ್ದನು.

ಇತ್ತೀಚಿನ ದಿವಸಗಳಲ್ಲಿ, ತಮ್ಮ ಧಾರ್ಮಿಕ ಸಭೆಗಳಿಗೆ ಹೆಚ್ಚಿನ ಸಂಖ್ಯೆಯ ಜನರನ್ನು ಆಕರ್ಷಿಸಿ, ಪ್ರಶ್ನೆ ಕೇಳಲಾರದ ಆ ಜನರಿಂದ ಬಹು ಶ್ರೀಮಂತರಾಗಿರುವದನ್ನು ಲೋಕವು ಗಮನಿಸುತ್ತಿದೆ. ಇದರ ನಿಮಿತ್ತವಾಗಿ, ಕೆಲವರು ಎಲ್ಲಾ ಧರ್ಮಗಳು ಮೋಸದವುಗಳೇ ಎಂದು ನಿರ್ಣಯಿಸಿರುವರು. ಆದರೆ ಕ್ರಿಸ್ತನ ಧರ್ಮವು ಇಂತಹ ಅಪವಾದದಿಂದ ಹೊರತಾಗಿದೆ ಎಂದು ನಾವು ಸಾಭೀತು ಪಡಿಸಬೇಕು. ಕರ್ತನ ಕೆಲಸ ಮಾಡುವಾಗ ಹಣದ ವ್ಯವಹಾರವು ಇರುವದಾದರೆ, ನಾವು ಹಗುರ ಮನೋಭಾವದವರಾಗಿರಬಾರದು. "ಎಲ್ಲರ ದೃಷ್ಟಿಯಲ್ಲಿ ಯಾವುದು ಗೌರವವಾದುದ್ದೋ ಅದನ್ನೆ ಯೋಚಿಸಿ ಸಾಧಿಸಿರಿ" (ರೋಮಾಪುರ 12:17; KJV).

## ಕಲಹ (20:3-5)

ಪೌಲನು ಯೆರೂಸಲೇಮಿಗೆ ಹೊರಡಲು ಸನ್ನದ್ಧನಾದಾಗ, ಯಥಾಪ್ರಕಾರವಾಗಿ ಸೈತಾನನು ಅವನಿಗೆ ಅಡ್ಡಿಪಡಿಸಿದನು.[25] ಲೂಕನು ಅದನ್ನು (ಸರಳವಾಗಿಯೇ) "ಅವನು ಸಿರಿಯ ದೇಶಕ್ಕೆ ಸಮುದ್ರ ಮಾರ್ಗವಾಗಿ ಹೋಗಬೇಕೆಂದಿದ್ದಾಗ" ಪೌಲನಿಗೆ ವಿರುದ್ಧವಾಗಿ ಯೆಹೂದ್ಯರು[26] ಒಳಸಂಚು ಮಾಡಿದರು.[27] ಎಂದು ತಿಳಿಸಿದನು (ವಚನ 3ಬಿ). ಈ ಹಿಂದೆ ಗಲ್ಲಿಯೋನನ ಬಳಿಗೆ ಪೌಲನನ್ನು ಎಳೆದು ತಂದ ಯೆಹೂದ್ಯರು ಇವರೇ ಇರಬಹುದು (18:12-17); ನಿಯಮದ ಪ್ರಕಾರ ಅವರುಗಳು ಪೌಲನನ್ನು ನಾಶಮಾಡಲು ಸಾಧ್ಯವಾದೆ ಇದ್ದಾಗ, ಅವರು ನಿಯಮ ಬಾಹಿರವಾದ ಕೃತ್ಯಗಳನ್ನು ಎಸೆಗಿದರು. ಆ ಒಳಸಂಚು ಏನೆಂದು ನಾವರಿಯೆವು. ಬಹುಶಃ ಪೌಲನು ಅವನ ಹಿಂದಿನ ಯೋಜನೆಯಂತೆ, "ಕೆಂಕ್ರೆಯಿಂದ ಸಿರಿಯಕ್ಕೆ ಸಮುದ್ರ ಪ್ರಯಾಣ ಮಾಡಿದಂತ ಯೋಜನೆಯನ್ನೆ ಈಗಲೂ ಮಾಡಿರಬಹುದು" (18:18).[28] ಹೇಗೂ ಒಂದು ವೇಳೆ ಅವನು ಕೆಂಕ್ರೆಯಿಂದ ಕೊರಿಂಥದ ಮಾರ್ಗದಲ್ಲಿ ಹೋಗುವಾಗ,[29] ಅವನನ್ನು ಕೊಲ್ಲುವ ಸಂಚನ್ನು ಮಾಡಿರಬಹುದು; ಒಂದು ವೇಳೆ ಅವನನ್ನು ಹಡಗುದಾಣದಲ್ಲಿ ಹಿಡಿದು, ಸಮುದ್ರ ಪ್ರಯಾಣದಲ್ಲಿ ಅವನನ್ನು ಸಮುದ್ರಕ್ಕೆ ಎಸೆಯುವ ಪ್ರಯತ್ನವನ್ನು ಮಾಡಿರಬಹುದು.

ದೇವರ ಅನುಗ್ರಹದಿಂದ, ಇನ್ನೊಂದು ಸಾರಿ ಪೌಲನು, ಈ ಸಂಚನ್ನು ಅರಿತವನಾಗಿ ತನ್ನ ಯೋಜನೆಯನ್ನು ಮಾರ್ಪಡಿಸಿದನು. ಅವನ ಸಂಗಡಿಗರು ಹಡಗುದಾಣಕ್ಕೆ ಬಂದು (ತ್ರೋವದಲ್ಲಿ ಅವನಿಗಾಗಿ ಕಾಯಬೇಕೆಂಬ ಸೂಚನೆಯನ್ನು ಪಡೆದು) (20:4, 5).[30] ಪೌಲನು ತಾನು ಹಡಗನ್ನು ಹತ್ತಲು ಕಾಯುತ್ತಿರಲಾಗಿ, "ಅವನು ಮೆಕೆದೋನ್ಯದ ಮೇಲೆ ಹಿಂತಿರುಗಿ ಹೋಗುವದಕ್ಕೆ ತೀರ್ಮಾನ ಮಾಡಿದನು" (ವಚನ 3ಸಿ).

ನಾವು ಯೋಗ್ಯವಾದ ಕಾರ್ಯವನ್ನು ಸ್ಥಿರವಾಗಿ ಮಾಡುವಾಗ, ವಿರೋಧಗಳು ಉದ್ಭವಿಸುತ್ತವೆ. ಸೈತಾನನು ಅದನ್ನು ತನ್ನ ಮುಖ್ಯ ಕಾರ್ಯವನ್ನಾಗಿ ಮಾಡಿಕೊಳ್ಳುವನು. ಕೊರತೆಯಲ್ಲಿರುವವರಿಗಾಗಿ ಸಹಾಯ ಮಾಡಲು ಮುಂದಾಗುವಾಗ, ಅನ್ಯರಿಂದ ಯಾವಾಗಲೂ ಕಲಹ ಉದ್ಭವಿಸುವದಿಲ್ಲ (ಪೌಲನ ವಿಚಾರದಲ್ಲಿ ಆದಂತೆ) ಕೆಲವು ಸಾರಿ, ವಿಶ್ವಾಸಿಗಳಿಂದಲೇ[31] ಕಲಹವು ಉಂಟಾಗುತ್ತದೆ. ಅಂತಹ ಕಲಹಗಳು ನೀವು ಮಾಡುವ ಉತ್ತಮ ಕಾರ್ಯಕ್ಕೆ ಅಡ್ಡಿಯಾಗದಿರಲಿ, ಮುಖ್ಯವಾಗಿ ನಂಬಿಕೆಯಲ್ಲಿರುವವರಿಗೆ (ಗಲಾತ್ಯ 6:10).

## ಮುಗಿಯಿತು (20:6)

ಮೆಕೆದೋನ್ಯಕ್ಕೆ ಹೋಗುವದು ಪೌಲನ ಮುಖ್ಯ ಯೋಜನೆ ಆಗಿರದೆ ಇದ್ದರೂ, ಆದಾಗ್ಯೂ ಅಲ್ಲಿರುವ ಸಹೋದರರನ್ನು ಸಂಧಿಸುವ ಸದಾವಕಾಶವನ್ನು ಪೌಲನು ಹೊಂದಿದ್ದನು. ಯೆರೂಸಲೇಮಿನಲ್ಲಿ ಉಂಟಾಗ ಬಹುದಾದ ಅಪಾಯವನ್ನು ಪೌಲನು ಅರಿತ್ತಿದ್ದರೂ (ರೋಮಾಪುರ 15:31),[32] ಕಣ್ಣೀರಿನ ಬೀಳ್ಕೊಡುಗೆಯನ್ನು ಮರೆಯಲಾಗದು (ನೋಡಿರಿ, ಅಪೊಸ್ತಲರ ಕೃತ್ಯಗಳು 20:22-25, 36-38) ಯಾಕಂದರೆ ಅವರನ್ನು ಪೌಲನು ಅತಿಯಾಗಿ ಪ್ರೀತಿಸಿದ್ದನು.

ಅಂತಿಮವಾಗಿ, ಪೌಲನು ತಾನೇ ಹೊರಟನು ಎಂದು ಲೂಕನು ಬರೆದು, "ಹುಳಿಯಿಲ್ಲದ ರೋಟ್ಟಿಯ ಹಬ್ಬದ ದಿವಸಗಳನ್ನು ಪೂರೈಸಿದ ಮೇಲೆ ನಾವು ಫಿಲಿಪ್ಪಿಯಿಂದ ಹೊರಟು ಹಡಗನ್ನು ಹತ್ತಿ ಐದು ದಿವಸಗಳಲ್ಲಿ ತ್ರೋವಕ್ಕೆ ಬಂದೆವು; ..."[34] (ವಚನ 6). "ಹುಳಿಯಿಲ್ಲದ ರೊಟ್ಟಿಯ ಹಬ್ಬದ ದಿವಸ" ಎಂಬ ಹೇಳಿಕೆಯು, ವರ್ಷದ ದಿವಸದ ಸೂಚನೆಯನ್ನು ತಿಳಿಸುತ್ತದೆ (ವಸಂತದ ಆರಂಭ).[35] "ನಾವು" ಎಂಬುದಾಗಿರುವದರಿಂದ; ಅವನ ಸಂಗಡ ಇತರರಿದ್ದರು.[36] ಎಂದು ಲೂಕನು ತಿಳಿಸಿರುವನು. ಎರಡನೆಯ ಸೇವಾ ಪ್ರಯಾಣದಲ್ಲಿ ಫಿಲಿಪ್ಪಿಗೆ ಒಂದಾಗ, ಅವನು "ಒಬ್ಬನು" ಎಂಬ ಪದವನ್ನು ಲೂಕನು ಬಳಸಿರುವನು (ನೋಡಿರಿ 16:11, 12, 40); ಏಕೆಂದರೆ ಲೂಕನು, ಪೌಲನನ್ನು ಸೇರುವವರೆಗೆ, ಫಿಲಿಪ್ಪಿಯ ಸಹೋದರ ರೊಂದಿಗೆ ಕೆಲಸ ಮಾಡುತ್ತಿದ್ದನು ಎಂಬ ಸೂಚನೆಯನ್ನು ನೀಡಿರುವನು. ಒಂದು ವೇಳೆ, ಈ ಸಮಯದಿಂದ ಪೌಲನ ಮರಣದ ತನಕ ಲೂಕನು ಅವನನ್ನು ಬಿಟ್ಟಿರದೇ ಇರಬಹುದು (ಕೊಲೊಸ್ಸೆ 4:14; ಫಿಲೆಮೋನ 24; 2 ತಿಮೊಥೆ 4:11). ಲೂಕನನ್ನು ತಿಮೊಥಿಯನ್ನು ತನ್ನ ಸಂಗಡ ಇಟ್ಟು ಕೊಂಡದ್ದರಿಂದ, ಪೌಲನಿಗೆ ಎಷ್ಟೋ ಉತ್ತೇಜನವಾಗಿರಬಹುದು!

ನಮ್ಮ ಮುಂದಿನ ಪಾಠದಲ್ಲಿ, ತ್ರೋವದಲ್ಲಿದ್ದ ಪೌಲ ಮತ್ತು ಅವನ ಸಂಗಡಿಗರ ಕಥೆಯನ್ನು ಮುಂದುವರಿಸೋಣ. ಈ ಸಮಯದಲ್ಲಿ, ಅವರು ಬಡವರಿಗೆ ಸಂಗ್ರಹಿಸಿದ ದೇಣಿಗೆಯ ಯಶಸ್ಸನ್ನು ಕುರಿತು ಅಂತ್ಯಗೊಳಿಸುವೆನು. ಲೂಕನು ನಂತರ, ಬರೆದು, "ನಾವು ಯೆರೂಸಲೇಮಿಗೆ ಬಂದಾಗ ಸಹೋದರರು ನಮ್ಮನ್ನು ಸಂತೋಷದಿಂದ ಸೇರಿಸಿ ಕೊಂಡರು" (21:17). ಮರುದಿನ ಸಭೆ ಹಿರಿಯರೆಲ್ಲರು ಸಹ ಕೂಡಿ ಬಂದರು (21:18), ಈ ಸಮಯದಲ್ಲಿಯೇ ಸಂಗ್ರಹಿಸಿದ್ದ ಕಾಣಿಕೆಯನ್ನು ಅವರಿಗೆ ನೀಡಿರಬಹುದು (ಪೌಲನು ಅದನ್ನು ತನ್ನ ಜನಾಂಗದರಿಗೆ ಸಂಗ್ರಹಸಿದ ಕಾಣಿಕೆ ಎಂದಿರುವನು) (24:17). ಪೌಲನು, "ಯೆರೂಸಲೇಮಿಗೆ ಮಾಡಿದ ಸೇವೆಯು" "ದೇವ ಜನರಿಗೆ ಮೆಚ್ಚುಗೆ ಉಂಟು ಮಾಡಿತು" (ರೋಮಾಪುರ 15:31); ಎಲ್ಲವೂ ಸನ್ನಿಹಿತವಾಗಿ ನಡೆಯಿತು.

ಕಾಣಿಕೆ ದ್ರವ್ಯವನ್ನು ಸಂಗ್ರಹಿಸುವದು ಸುಲಭವಾದ ಕಾರ್ಯವಾಗಿರಲಿಲ್ಲ - ಆ ಯೋಜನೆಯನ್ನು ಪೂರ್ಣಮಾಡಲು ಸುಮಾರು ನಾಲ್ಕು ವರ್ಷಗಳ ಕಾಲ ಬೇಕಾ ಯಿತು - ಆದರೆ ಪೌಲನು ಸೋತು ಹೋಗಿರಲಿಲ್ಲ. ಅವನು ಆ ಯೋಜನೆಯನ್ನು ಪೂರ್ಣಗೊಳಿಸಿದ್ದು. ಉತ್ತಮವಾದ ಆಲೋಚನೆಗಳು ಸಾಲುವದಿಲ್ಲ; ನಾವು ಒಳ್ಳೆಯ ಕಾರ್ಯವನ್ನು ಆರಂಭ ಮಾಡಿದರೆ, ಅದನ್ನು ಪೂರ್ಣಗೊಳಿಸಬೇಕು (ಲೂಕ 14:28-30; 2 ಕೊರಿಂಥ 8:6, 11). ಸಾರ್ದಿಸಿನ ಸಹೋದರರಿಗೆ, ಯೇಸು ಹೇಳಿದ್ದೇನೆಂದರೆ, "ನನ್ನ ದೇವರ ಮುಂದೆ ನಿನ್ನ ಕೃತ್ಯಗಳಲ್ಲಿ ಒಂದಾದರೂ ಸಂಪೂರ್ಣವಾದದ್ದೆಂದು ನಾನು ಕಾಣಲಿಲ್ಲ" (ಪ್ರಕಟನೆ 3:2)!

## ಮುಕ್ತಾಯ

ಪೌಲನ ಕಾಳಜಿಯ ನಿದರ್ಶನದಿಂದ, ನಾವುಗಳು ನಮ್ಮ ಸಹೋದರರ ಕುರಿತು ಕಾಳಜಿವಹಿಸಬೇಕು ಎಂಬುದನ್ನು ಅರಿತೆವು. ಯೋಹಾನನು ಬರೆದು, "ಈ ಲೋಕದ

ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೇ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದುಂಟೆ?" (1 ಯೋಹಾನ 3:17). "ಕೊರತೆ" ಎಂಬುದರಲ್ಲಿ, ದೈಹಿಕ ಕೊರತೆಗಳು ಒಳಗೊಂಡಿರುತ್ತವೆ; ಹಾಗೂ ಅಲ್ಲಿ ಉದ್ವೇಗದ ಕೊರತೆಗಳೂ ಇರುತ್ತವೆ (ಬಹಳ ಪ್ರಮುಖವಾಗಿ) ಆತ್ಮೀಕ ಕೊರತೆಗಳು ಸೇರಿರುತ್ತವೆ.

ನಮ್ಮ ಪಾಠವನ್ನು ಪ್ರಾಯೋಗಿಕವಾಗಿಡಲು, ನಾನು ಐದು ಅಭಿಪ್ರಾಯಗಳನ್ನು ನೀಡುತ್ತೇನೆ:

(1) ಕೊರತೆಗಳ ಇರುವಿಕೆಯ ಬಗ್ಗೆ ಗಮನ ಇಟ್ಟುವರಾಗಿರ್ರಿ.

(2) ಕೊರತೆಗಳು ಉದ್ಭವವಾಗುವಾಗ, ನಿಮ್ಮ ಹೃದಯಗಳು ಮೃದುವಾಗಿರಲಿ ಕಠಿಣ ಮಾಡಿಕೊಳ್ಳುವದು ಸುಲಭ ("ಅವರು ಕೊರತೆಗಳು ಹೊಂದಿರುವದು, ಅವರ ಸಮಸ್ಯೆ" ಎಂದು ಕೆಲವರು ಹೇಳುವರು).

(3) ಸಹಾಯ ಮಾಡುವ ಸ್ಥಿರ ಯೋಜನೆಯನ್ನು ಮಾಡಿರಿ.

(4) ವಿರೋಧಿ ಬರುವಾಗ, ಆಶ್ಚರ್ಯ ಪಡಬೇಡಿ. ನಿಮ್ಮದೇ ಆದ ಹೃದಯದಿಂದ ವಿರೋಧ ಉದ್ಭವಿಸುವಾಗಲೂ ಆಶ್ಚರ್ಯಪಡಬೇಡಿರಿ.

(5) ನಿಮ್ಮ ಯೋಜನೆಗಳನ್ನು ಮುಂದುವರಿಸಿ ನೆನಪಿಡಬೇಕಾದದ್ದು: "ಸಮಾಧಾನ ದಿಂದ ಹೋಗಿರಿ, ಬೆಂಕಿಕಾಯಿಸಿಕೊಳ್ಳಿರಿ, ಹೊಟ್ಟೆ ತುಂಬಿಸಿಕೊಳ್ಳಿರಿ" ಎಂದು ಹೇಳಿದರೆ, ಆ ಮಾತಿನಲ್ಲಿ ಅರ್ಥವಿರುವದಿಲ್ಲ (ಯಾಕೋಬ 2:16).

ಸಭೆಗಳಲ್ಲಿ ಒಡನಾಟವನ್ನು ವೃದ್ಧಿಪಡಿಸುವ ಸಲುವಾಗಿ, ಪೌಲನು ಕಾಣಿಕೆಯನ್ನು ಸಂಗ್ರಹಿಸಿದನು. ನಾವುಗಳು ಇತರರಿಗೆ ಸಹಾಯಿಸಲು ಒಪ್ಪಿಸಿಕೊಟ್ಟರೆ, ಕರ್ತನ ದೇಹದಲ್ಲಿ ಶಾಂತಿ, ಸಹನೆಯನ್ನು ನೀಡುವ ಸಾಧ್ಯತೆಯಿದೆ!

## ಪ್ರಸಂಗದ ಟಿಪ್ಪಣಿ

"ಬಡವರನ್ನು ನೆನಪು ಮಾಡಿಕೊಳ್ಳಿರಿ" ಎಂಬ ತಲೆಬರಹವನ್ನು ನೀಡಿದ್ದರೂ, ದೇವ ಜನರಲ್ಲಿ ಬಡವರಾದವರ ಕುರಿತು ನಾನು ಆಲೋಚನೆ ನೀಡಿರುವೆನು. ನೀವು ಗಳು ಬಡವರನ್ನೂ ಈ ಪಟ್ಟಿಯಲ್ಲಿ ಸೇರಿಸಬಹುದು. ಬಡವರ ಕುರಿತು ಸಾಮಾನ್ಯ ವಾದ ವಿಚಾರವನ್ನು ಸತ್ಯವೇದವು ತಿಳಿಸುತ್ತದೆ. ಅದರ ಆರಂಭವನ್ನು ಈ ರೀತಿಯಾಗಿ ಮಾಡಬಹುದು ಮತ್ತಾಯ 19:21; ಲೂಕ 14:13, 21; 19:8; 2 ಕೊರಿಂಥ 9:9; ಯಾಕೋಬ 2:2-6.

ಯೆರೂಸಲೇಮಿನವರಿಗಾಗಿ ಕಾಣಿಕೆಯನ್ನು ಸಂಗ್ರಹಿಸಿದ ಕುರಿತು ನಾನು ಈ ಪ್ರಸಂಗವನ್ನು ಮಡಿರುವೆನು. ನೀವು ಪೌಲನ ಮೂರನೆಯ ಪ್ರಯಾಣವನ್ನು ಅಂತ್ಯಗೊಳಿಸುವುದಾದರೆ "ಪೌಲನ ಬೀಳ್ಕೊಡುಗೆಯ ಪ್ರಯಾಣ" ಎಂಬ ಪಾಠವನ್ನು ಸಾರಬಹುದು (ಅಮೇರಿಕದ ಪ್ರಸಿದ್ಧ ಹಾಡುಗಾರರು, ತಮ್ಮ ನಿವೃತ್ತಿಯನ್ನು ತಿಳಿಸುವಾಗ "ಬೀಳ್ಕೋಡುವ ಪ್ರವಾಸವನ್ನು" ಮಾಡುವರು) ಪ್ರಯಾಣದ ಮುಖ್ಯ ಅಂಶವೇನೆಂದರೆ (1) ಆಸ್ಯ ಸೀಮೆಗೆ ಬೀಳ್ಕೊಡುಗೆ, (2) ಮೆಕೆದೋನ್ಯದ ಬೀಳ್ಕೊಡುಗೆ, (3) ಅಖಾಯಕ್ಕೆ ಬೀಳ್ಕೊಡುಗೆ. ಪೌಲನು ಒಂದು ಕಡೆ "ಬೀಳ್ಕೊಡುಗೆಯಾದರೆ" ಇನ್ನೊಂದೆಡೆ "ಆಹ್ವಾನ" ಎಂಬುದೆ. ಅವನು ಆಸ್ಯವನ್ನು ಬಿಟ್ಟಾಗ, ಮೆಕೆದೋನ್ಯ ಮತ್ತು ಅಖಾಯಕ್ಕೆ "ಸ್ವಾಗತ" ಎಂಬುದೆ (ಅಪೊಸ್ತಲರ ಕೃತ್ಯಗಳು 19:21) ಅವನು ಅಖಾಯವನ್ನು ಬಿಟ್ಟಾಗ, ಯೆರೂಸಲೇಮಿಗೂ ಮತ್ತು ರೋಮಾ ಯಕ್ಕೂ ಸ್ವಾಗತಗೊಂಡನು (19:21, 22) ಬೀಳ್ಕೊಡುವದು ದುಃಖಕರವೇ; ಆದರೆ ಒಬ್ಬನು ದೇವರ ಯೋಜನೆಯಲ್ಲಿ ನೆಲೆಗೊಂಡಿದ್ದರೆ, "ಬೀಳ್ಕೊಡುಗೆಯನ್ನು" ಯಾವಾಗಲೂ ಸ್ವಾಗತ

ಎಂದು ತಿಳಿಯಬಹುದು - ಜೀವನ ಪರ್ಯಾಂತರ! ("ಬೀಳ್ಕೊಡುಗೆಯ ಪ್ರಯಾಣ" ಅದು "ಅಂತಿಮ ಪ್ರವಾಸವಲ್ಲ" ಕೆಲವು ಸಾರಿ ಕಲೆಗಾರರು ತಮ್ಮ ನಿವೃತ್ತಿಯನ್ನು ರದ್ದುಪಡಿಸುತ್ತಾರೆ. ಗ್ರೀಸಿನ ಕ್ರೈಸ್ತರನ್ನು ಹಾಗೂ ಆಸ್ಯವನ್ನು ತಿರುಗಿ ಸಂಧಿಸಲಾರೆ ಎಂದು ಪೌಲನು ತಿಳಿದಿದ್ದರೂ, ಸಹಜವಾಗಿ ಪುನಃ ಸಂಧಿಸಿದನು).

---

ಟಿಪ್ಪಣೆಗಳು

[1]ಈ ಸಮಯದಲ್ಲಿಯೇ ರೋಮಾಪುರ 1 ಮತ್ತು 2 ಕೊರಿಂಥವನ್ನು ಬರೆದಿರಬಹುದು. ಲೂಕನು ಇದರ ವಿವರಣೆಯನ್ನು ನೀಡಿರುವದಿಲ್ಲ, ಏಕೆಂದರೆ ಅದನ್ನು ಈಗಾಗಲೇ ತಿಳಿಸಲಾಗಿದೆ. [2]William Barclay, *The Acts of the Apostles,* The Daily Study Bible Series, rev. ed. (Philadelphia: Westminster Press, 1976), 148. ಈ ಕಾಲವು ಸುಮಾರು ಎರಡು ವರ್ಷಗಳ ಕಾಲ ಇತ್ತೆಂದು F. F. Bruce ಸೂಚಿಸುತ್ತಾರೆ. (*The Book of Acts*, rev. ed. [Grand Rapids, Mich.: Wm. B. Eerdmans Publishing Co., 1988], 381). [3]ಯೆರೂಸಲೇಮಿನ ದೇವಜನರೆಲ್ಲರೂ ಬಡವರಾಗಿರಲಿಲ್ಲ, ಕೆಲವರು ಮಾತ್ರ ಆಗಿದ್ದರು. [4]ಸಮನಾದ ಘಟನೆಗಳು ಇದನ್ನು ಸ್ಪಷ್ಟ ಪಡಿಸುತ್ತವೆ. [5]ಪೌಲನು ಪ್ರತಿನಿರ್ಣಯಕ್ಕೂ ದೇವರ ಮಾರ್ಗದರ್ಶನ ಪಡೆದನು. [6]ಪೌಲನ ಮೂರನೆ ಪ್ರಯಾಣದ ನಕ್ಷೆ ನೋಡಿರಿ. [7]ದೇವರು ಕೊಟ್ಟ ಈ ಅವಕಾಶವನ್ನು ಪೌಲನು ಇಲ್ಲಿ ಲಾಭಕರವನ್ನಾಗಿ ಮಾಡಿಕೊಳ್ಳಲಿಲ್ಲ. [8]ಬಹುಶಃ ಪೌಲನು ಪತ್ರಿಕೆಯನ್ನು ತಿಮೊಥಿಗೆ ಬಾಯಿಂದ ಹೇಳಿರಬಹುದು (2 ಕೊರಿಂಥ 1:1). [9]ಆ ಇಬ್ಬರು ಅನಾಮಿಕ ಸಹೋದರರ ಹೆಸರು ತಿಳಿದಿರುವದಿಲ್ಲ, ಪೌಲನು ಅವರನ್ನು ಏಕೆ ಹೆಸರಿಸಲಿಲ್ಲವೆಂದು ಅರಿಯೆವು. ಲೂಕ, ಬಾರ್ನಬ ಮತ್ತು ತಿಮೊಥಿ ಎಂಬ ಹೆಸರಿನ ಅಭಿಪ್ರಾಯವಿದೆ. ಅಪೊಸ್ತಲರ ಕೃತ್ಯಗಳು 20:4ರ ಸಭೆಯ ಸಂದೇಶಕರಿರಬಹುದು. [10]ಪೌಲನ ಮೂರನೆ ಪ್ರಯಾಣದ ನಕ್ಷೆ ನೋಡಿರಿ, ಮೆಕೆದೋನ್ಯಕ್ಕಿಂತಲೂ ಇಲ್ಲೂರಿಕದ ಸಂದರ್ಶನ ಉತ್ತಮವಾಗಿದೆ.

[11]ಅವರನ್ನು ಪೌಲನು ಪುನಃ ಸಂಧಿಸದೆ ಇದ್ದರಿಂದ ಅಪೊಸ್ತಲರ ಕೃತ್ಯಗಳು 20:18-35ರ ಎಚ್ಚರಿಕೆ ಸಮಾನವಾಗಿದೆ. [12]ಹೇಗೂ ಅವನು ಚಳಿಗಾಲವನ್ನು ಕಳೆದಿರಬಹುದು, ಆಗ ಪ್ರಯಾಣವು ಕಷ್ಟಕರವಾಗಿತ್ತು. [13]ಯುಸ್ತ ತೀತನ ಮೂರನೆಯ ಹೆಸರೇ ಗಾಯವಿರಬಹುದು ಎಂಬ ಅಭಿಪ್ರಾಯವಿದೆ (18:7). [14]ತೆರ್ತ್ಯನೆಂಬವನಿಗೆ ಈ ಪತ್ರಿಕೆಯನ್ನು ಹೇಳಿ ಬರೆಸಿರಬಹುದು (ರೋಮಾಪುರ 16:22) ಮತ್ತು ಕೆಂಕ್ರೆಯ ಫೊಯಿಬೆಯು ಅದನ್ನು ರೋಮಾಯಕ್ಕೆ ಕೊಂಡೊಯ್ದಿರಬಹುದು (ರೋಮಾಪುರ 16:1, 2) (ಕೆಂಕ್ರೆಯು, ಕೊರಿಂಥದ ರೇವು ಪಟ್ಟಣವಾಗಿತ್ತು) ಅಕ್ವಿಲ ಮತ್ತು ಪ್ರಿಸ್ಕಿಲ್ಲ ಈಗ ರೋಮಾಯದಲ್ಲಿದ್ದು (ರೋಮಾಪುರ 16:3, 4); ಕೆಲವು ಕಾರಣಗಳಿಂದ ಅವರು ಎಫೆಸವನ್ನು ಬಿಟ್ಟು ರೋಮಾಯಕ್ಕೆ ಬಂದಿದ್ದರು. ಪ್ರಾಯಶಃ ವ್ಯವಹಾರದ ನಿಮಿತ್ತ ಬಂದಿರಬಹುದು. [15]ಅಪೊಸ್ತಲರ ಕೃತ್ಯಗಳು 20:4ರಲ್ಲಿರುವ ತಿಮೊಥಿಯು ಪೌಲನು ರೋಮಾಪರ ಪತ್ರಿಕೆಯನ್ನು ಬರೆದಾಗ ಪೌಲನೊಂದಿಗೆ ಕೊರಿಂಥದಲ್ಲಿದ್ದನು (ರೋಮಾಪುರ 16:21) ಅಪೊಸ್ತಲರ ಕೃತ್ಯಗಳು 20:4 ಸೊಪತ್ರನು ರೋಮಾಪುರ 16:21ರ ಸೂಪತ್ರನೇ (ಸೊಸಿಪತ್ರನ ಚಿಕ್ಕನಾಮ ಸೋಪತ್ರ) ಇನ್ನೊಬ್ಬ ಪ್ರತಿನಿಧಿಯು ಪೌಲನೊಂದಿಗೆ ಕೊರಿಂಥದಲ್ಲಿದ್ದನು. [16]ಹಿಂದಿನ ಟಿಪ್ಪಣಿಯಲ್ಲಿದ್ದಂತೆ, ರೋಮಾಪುರ 16:21ರ ಸೊಪತ್ರನೇ ಆಗಿರಬಹುದು. [17]ನಮ್ಮ ಹಿಂದಿನ ಪಾಠದಲ್ಲಿ ಅರಿಸ್ತಾರ್ಕನನ್ನು ಸಂಧಿಸಿದೆವು. ಅಪೊಸ್ತಲರ ಕೃತ್ಯಗಳು 19:29ರ ಟಿಪ್ಪಣೆ ನೋಡಿರಿ. [18]ಸೆಕುಂದನು ಅಂದರೆ ಅವನ "ಎರಡನೆಯವನು" ಅವನ ತದೆಯ ಎರಡನೆಯ ಮಗನಿರಬಹುದು - ಅಥವಾ ಅವನು "ದಾಸನಾಗಿರಬಹುದು" ಸಂಖ್ಯೆಗಿಂತಲು ಅಲ್ಪ ಜ್ಞಾಸ್ತಿ ರೋಮಾಪುರ 16:22, 23; ತೆರ್ತ್ಯನು ಅಂದರೆ (ಮೂರನೆ) ಮತ್ತು ಕರ್ತನು ಅಂದರೆ ("ನಾಲ್ಕನೆಯ"). [19]19:29ರ ಟಿಪ್ಪಣೆ. [20]ತುಖಿಕನು ನಂತರದಲ್ಲಿ ಪೌಲನೊಂದಿಗೆ ರೋಮಾಯದಲ್ಲಿದ್ದವನು (ಎಫೆಸ 6:21; ಕೊಲೊಸ್ಸೆ 4:7). ಬಿಡುಗಡೆಯ ಸಮಯದಲ್ಲಿ ಅವನೊಂದಿಗೆ ಪ್ರಯಾಣದಲ್ಲಿದ್ದನು (ತೀತ 3:12; 2 ತಿಮೊಥೆ 4:12).

[21]ತ್ರೋಫಿಮನು, ಪೌಲನನ್ನು ದೇವಾಲಯದಲ್ಲಿ ಬೈದನು (21:29). ಪೌಲನ ಕಡೆಯ ಕಾಲದಲ್ಲಿ ಅವನೊಂದಿಗಿದ್ದನು (2 ತಿಮೊಥೆ 4:20). [22]ಅಖಾಯ ಪ್ರತಿನಿಧಿಯ ಹೆಸರಿರುವದಿಲ್ಲ. ಇದು ವಿಚಿತ್ರ, 1 ಕೊರಿಂಥ 16:3, 4, ಬಹುಶಃ ಕೊರಿಂಥ ಪ್ರತಿನಿಧಿ ಪೌಲನೇ ಆಗಿರಬಹುದು - ಅಥವಾ ತೀತ. ಅಥವಾ ಹೆಸರಿಸದ ಸಂದೇಶಕರಾ ಗಿರಬಹುದು. 2 ಕೊರಿಂಥ 8:18-23, ಅಥವಾ ಹೆಸರಿಲ್ಲದ ಇತರರಿರಬಹುದು. [23]ಆಗಾಗ್ಗೆ ಪೌಲನು ತನ್ನ ಜೊತೆ ಪ್ರಯಾಣಿಕರನ್ನು ಬದಲಿಸುತ್ತಿದ್ದನು (20:5, 13, 14) ಅವನ ಜೊತೆಗಾರರೇ ಹಣವನ್ನು ರವಾನಿಸಬಹುದು. [24]ಅವರನ್ನೆಲ್ಲಾ ಪ್ರಸಂಗಿಗಳು ಎಂದು

ಕರೆಯುತ್ತಿದ್ದರು, ತರಬೇತು ಪಡೆಯುತ್ತಿದ್ದರು, ಯೆರೂಸಲೇಮಿನ ಪ್ರಯಾಣದಲ್ಲಿ ಅವನು ಎಲ್ಲರಿಗೂ ತರಬೇತಿ ನೀಡಿರಬಹುದು, ಈ ಅನ್ಯ ಸಹೋದರರು ವೈಯ ಕ್ತಿಕವಾಗಿ ಹಣ ಸಂಗ್ರಹಮಾಡಿದ್ದರಿಂದ, ವಂದನೆ ಎಂದು ಹೇಳುತ್ತಿದ್ದರು ಅವರು ತಾವಾಗಿಯೇ ಯೆಹೂದ್ಯರ ಕೈಗೆ ಹಣ ನೀಡುತ್ತಿರಬಹುದು. "ವೈಯಕ್ತಿಕವಾಗಿ" ಮಾಡುವದು ಒಳ್ಳೆಯ ಅಂಶವೇ. [25]ಪೌಲನು ಮೆಕೆದೋನ್ಯದಲ್ಲಿ ಕಲಹವನ್ನು ಎದುರಿಸಿದ್ದನು (2 ಕೊರಿಂಥ 7:5); ಈಗ ಅಖಾಯದಲ್ಲಿಯೂ ಕಲಹ ಉಂಟಾಯಿತು. [26]ಯೆಹೂದ್ಯರ ದಂಗೆಯ ಕುರಿತು 9:24; 23:16; 25:3; ನೋಡಿರಿ 2 ಕೊರಿಂಥ 11:26. [27]ಅಂತಿಮವಾಗಿ ಪೌಲನು ಯೆರೂಸಲೇಮಿಗೆ ಹೋಗುವವನಿದ್ದನು, ಆದರೆ ಹಡಗು ಸಿರಿಯದ ಕಡೆಗೆ ಹೋಗುತ್ತಿತ್ತು. ಅವನು ಸಿರಿಯಕ್ಕೆ ಹೋಗಿ ಅಂತಿಯೋಕ್ಯದ ಸಹೋದರರಿಗೆ ವರದಿ ಸಲ್ಲಿಸುವದು ಮೂಲ ಉದ್ದೇಶವಾಗಿತ್ತು, ನಂತರ ಕಾಣಿಕೆಯನ್ನು ಯೆರೂಸಲೇಮಿಗೆ ಒಯ್ಯುತ್ತಿದ್ದನು. [28]ಹುಳಿ ಇಲ್ಲದ ರೊಟ್ಟಿಯ ಹಬ್ಬದ ಸಮಯಕ್ಕೆ ಯೆಹೂದ್ಯ ಪ್ರಯಾಣಿಕರ ಯಾತ್ರೆಯ ಹಡಗನ್ನು ಹತ್ತಿ ಯೆರೂಸಲೇಮಿಗೆ ಹೋಗುವವನಿದ್ದನು. ಆದರೆ ವಾಕ್ಯದ ಪ್ರಕಾರ, ಸಿರಿಯಕ್ಕೆ ಹೊರಟನು (ಅಂತಿಯೋಕ್ಯದ ಬಳಿಗೆ), ಪಾಲಿಸ್ತೇನಕ್ಕೆ ಹೋಗಲಿಲ್ಲ (ಯೆರೂಸಲೇಮು ಇರುವ ಸ್ಥಳ). [29]ಕಾಣಿಕೆಯ ಕುರಿತು ಯೆಹೂದ್ಯರು ಅರಿತಿರುವ ವಿಷಯ ತಿಳಿದಿರುವದಿಲ್ಲ. ಆ ರಹಸ್ಯವನ್ನು ಕಾಪಾಡಲು ಸಾಧ್ಯವಾಗಲಿಲ್ಲ. ಕಳ್ಳರು ಅವನನ್ನು ದೋಚಿದ್ದರೆ, ಅವನ ಮರಣವು ಧಾರ್ಮಿಕ ಮರಣವಾ ಗುತ್ತಿರಲಿಲ್ಲ. [30]ಅವನ ಸಂಗಡಿಗರು ಅವನನ್ನು ಬಿಟ್ಟು ಹೋದ ಸಮಯವನ್ನು ಲೂಕನು ತಿಳಿಸಿರುವದಿಲ್ಲ. ಅದರ ಸಾಧ್ಯತೆಯ ಚಿತ್ರಣವಿದೆ. ಆ ಏಳು ಜನರು ತ್ರೋವಕ್ಕೆ ಹೋದರು ಎಂಬ ಸಂಕೇತವಿಲ್ಲ ವ್ಯಾಕರಣದ ಪ್ರಕಾರ ವಚನ 5ರ "ಇವೆಲ್ಲಾ" ವಚನ 4ರ ಕಡೆಯ ಎರಡು ಎಂಬದೆ ಬಹುಶಃ ಏಳು ಜನರು ತ್ರೋವಕ್ಕೆ ಹೋಗಿರಬಹುದು.

[31]ಸಭೆಯ ಹಣವನ್ನು ಸಭೆಯು ದೇವ ಜನರಿಗೆ ಮಾತ್ರ ನೀಡಬೇಕು ಎಂಬುದಾಗಿದ್ದರೂ ಅನಾಥರಿಗೂ ನೀಡಬಹುದು ಎಂಬ ಅಭಿಪ್ರಾಯವಿದೆ. ಅವರ ಸಂಕಟದ ನಿವಾರಣೆ ಮಾತ್ರವಾಗಿರದೆ, (ಯೆರೂಸಲೇಮಿನ ಬಡ ಕ್ರೈಸ್ತರು ಉಪವಾಸವಿದ್ದರೆ, ಕಾಣಿಕೆ ಹೋಗುವವರೆಗೆ, ಈಗಾಗಲೇ ಸತ್ತು ಹೋಗಿರುತ್ತಿದ್ದರು), ನಾವು ಪ್ರೀತಿಯನ್ನು ತೋರ್ಪಡಿಸಲು ಇದನ್ನು ಮಾಡ ಬೇಕು. ಇದನ್ನು ಅಧಿಕವಾಗಿ ಮಾಡಬೇಕು. ಸದಸ್ಯರಿಗೂ ಸದಸ್ಯರಲ್ಲದವರಿಗೂ ಮಾಡಬೇಕು. [32]ಅಪೊಸ್ತಲರ ಕೃತ್ಯಗಳು 20:22ರಲ್ಲಿ ಅದರ ಅಪಾಯದ ಕುರಿತು ಪೌಲನು ಹೇಳಿರುವನು, ಅವನು ಮೆಕೆದೋನ್ಯವನ್ನು ಬಿಟ್ಟನಂತರ, ಅವನು ಒಂದು ಪಟ್ಟಣವನ್ನು ಮಾತ್ರ (ತ್ರೋವ) ಸಂಧಿಸಿದ್ದನು. ಪ್ರತಿಪಟ್ಟಣ ಎನ್ನುವದು, ಮೆಕೆದೋನ್ಯದ ಪಟ್ಟಣಗಳು ಎಂದು ಅರಿಯುವದು. [33]ನಿಯಾಪೋಲಿಯಿಂದ ಪ್ರಯಾಣಿಸಿರಬಹುದು, ಅದು ಫಿಲಿಪ್ಪಿಯ ರೇವು ಪಟ್ಟಣವಾಗಿತ್ತು (16:11, 12). [34]ಏಗಿಯನ್ ಸಮುದ್ರವನ್ನು 2 ದಿವಸದಲ್ಲಿ ದಾಟಬಹುದಿತ್ತು (16:11); ಆ ಸಮಯದಲ್ಲಿ ಹವಾ ಗುಣವು ಚೆನ್ನಾಗಿರಬಹುದು. [35]ಲೂಕನು ಮತ್ತು ಕ್ರೈಸ್ತರು ಆ ಹಬ್ಬವನ್ನು ಆಚರಿಸಿದರು ಎಂಬ ಸೂಚನೆ ಇರುವದಿಲ್ಲ ಲೂಕನು ಅನ್ಯನಾಗಿದ್ದರಿಂದ, ಯೆಹೂದ್ಯರ ಆಚರಣೆಯನ್ನು ಮಾಡಲಿಲ್ಲ. [36]"ನಾವು" ಎಂಬುದು ಲೂಕನ ಸಂಗಡ ಇತರರಿದ್ದರು ಎಂದು ತಿಳಿಸುತ್ತದೆ 20:4ರಲ್ಲಿ ತೀತ ಮತ್ತು ಇತರರನ್ನು ಹೆಸರಿಸಿರುವದಿಲ್ಲ. ನಿಶ್ಚಯವಾಗಿ ಲೂಕನನ್ನು ಸೇರಿಸಲಾಗಿದೆ, ಪುನಃ ಲೂಕನು ಸಕಲ ವಿವರಣೆ ನೀಡಿರುವದಿಲ್ಲ. ಪೌಲನು ಮೆಕೆದೋನ್ಯಕ್ಕೆ ಹಿಂದಿರುಗುವ ಯೋಜನೆ ಇರಲಿಲ್ಲ, ತ್ರೋವದಲ್ಲಿ ಲೂಕನು ಅವರನ್ನು ಸೇರಿಕೊಳ್ಳುವ ಯೋಜನೆ ಯಲ್ಲಿತ್ತು; ಅಥವಾ ಪೌಲನೊಂದಿಗೆ ಮೆಕೆದೋನ್ಯಕ್ಕೆ ಹಿಂದಿರುಗಿದ ತೀತನ ಸಂಗಡವಿದ್ದ ಹೆಸರಿಸದವನು ಲೂಕನು ಇರಬಹುದು, ನಂತರ ಅವರು ಫಿಲಿಪ್ಪಿಗೆ ಸಮುದ್ರ ಪ್ರಯಾಣ ಮಾಡಿದರು.